ಹೀಗೆ ನಿಗದಿ ಮಾಡಿದ್ದ ಪಕ್ಷಕ್ಕೆ, ಮತ್ತು ಕೇಂದ್ರ ಸರ್ಕಾರದವರು ಸಹಾಯಕ್ಕೆ ಬಾರದಿದ್ದ ಪಕ್ಷದಲ್ಲಿ ಇದನ್ನು ರಾಜ್ಯ ಸರ್ಕಾರದವರೇ ಕೊಡಬೇಕೆಂದು ಯೋಚನೆಯನ್ನು ಮಾಡಿದ್ದಾರಾ ಎಂಬುದು ನನ್ನ ಪ್ರಶ್ನೆ. ಇದಕ್ಕೆ ಉತ್ತರ ಬೇಕಾಗಿದೆ.

ಶ್ರೀ ಬಿ.ಎಲ್. ಗೌಡ.—ರೈತರಿಗೆ ಲಾಭದಾಯಕವಾದ ಬೆಲೆ ಕೊಡಬೇಕೆಂಬುದೇ ನಮ್ಮ ಉದ್ದೇಶ ಕೊಡಿ ಎಂದು ಅವರು ಕೇಳಿದ್ದಾರೆ. ಕೊಡಬೇಕೆಂದು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ.—ಯಾವಾಗಲೂ ಒಂದು ಬೆಲೆಯನ್ನು ಆಧರಿಸಬೇಕಾದ ಕಾಲದಲ್ಲಿ ಆ ಬೆಳೆಯನ್ನು ಉತ್ಪಾದನೆ ಮಾಡತಕ್ಕಂಥ ಖರ್ಚು, ಅದಕ್ಕೆ ಉಪಯೋಗಿಸಿದಂತಗೊಬ್ಬರ, ಕ್ರಿಮಿಕೀಟ ನಾಶಕ ಔಷಧಿದಿಗಳು ಇತ್ಯಾದಿಗಳ ಬಗ್ಗೆ ತಗುಲಿದ ಖರ್ಚು ಮತ್ತು ಉತ್ಪಾದನಾ ವೆಚ್ಚವನ್ನುಗಮನದಲ್ಲಿಟ್ಟು ಕೊಂಡು ಬೆಲೆಯನ್ನು ನಿಗದಿಪಡಿಸಬೇಕಾಗುತ್ತದೆ.

ಉಪಾಧ್ಯಕ್ಷರು. – ಸರಿಯಾದ ಪ್ರಶ್ನೆ ಕೇಳಿ.

ಶ್ರೀ ಎನ್. ಚಿಕ್ಕೇಗೌಡ.—ಕೃಷಿ ವಿಶ್ವವಿದ್ಯಾನಿಲಯದವರು ಮತ್ತು ಇಲಾಖೆಯವರು ನೀಡಿರುವ ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಬೆಲೆ ನಿಗದಿ ಪಡಿಸಬೇಕಾದದ್ದು ಸಹಜವಾದುದಲ್ಲವೆ ?

ಶ್ರೀ ಬಿ. ಎಲ್. ಗೌಡ.—ಮಾಜಿ ಕೃಷಿ ಮಂತ್ರಿಯವರು ಹೇಳಿದ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ಶಿಫಾರಸ್ಸು ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ನನ್ನದು ಇನ್ನೊಂದೇ ಪ್ರಶ್ನೆ ಇದೆ. ಮೂಲ ಪ್ರಶ್ನೆಯನ್ನು ಕೇಳಿದವರಿಗೆ ಮತ್ತೊಂದು ಪ್ರಶ್ನೆಯನ್ನು ಕೇಳಲು ಅವಕಾಶ ಕೊಡುವುದಿಲ್ಲವೆ ?

MR. DEPUTY SPEAKER.—If you want further discussion in the matter please give notice to discuss the matter.

SRI BHEEMANNA S. KHANDRE.—My question is directly concerned

ಉಪಾಧ್ಯಕ್ಷರು.—ಎಲ್ಲರೂ ಹೀಗೆ ಉಪಪ್ರಶ್ನೆಗಳನ್ನು ಕೇಳುವುದು ಸರಿಯಲ್ಲ. The entire day will have to be devoted for this purpose.

ಗುಲ್ಬರ್ಗ ಜಿಲ್ಲೆಯ ಷಹಾಪುರಕ್ಕೆ ಮೊದಲನೆ ದರ್ಜೆ ಕಾಲೇಜು ಮಂಜೂರು ಮಾಡುವ ಬಗ್ಗೆ

೫೨. ಶ್ರೀ ಬಾಪೂಗೌಡ ದರ್ಶನಾಪುರ (ಷಹಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಗುಲ್ಬರ್ಗ ಜಿಲ್ಲೆಯ ಷಹಾಪುರದಲ್ಲಿ ಸರ್ಕಾರವು ಮೊದಲನೆ ದರ್ಜೆ ಕಾಲೇಜು ಮಂಜೂರು ಮಾಡಿದ್ದು ನಿಜವೆ ?

ಬ) ಒಂದುವೇಳೆ ಇಲ್ಲದಿದ್ದರೆ, ಸರ್ಕಾರ ತಕ್ಷಣವೇ ಷಹಾಪುರದಲ್ಲಿ ಮೊದಲನೆ ದರ್ಜೆ ಕಾಲೇಜು ಮಂಜೂರು ಮಾಡಲು ಯೋಚಿಸಿದೆಯೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಬ) ರಾಜ್ಯ ಸರ್ಕಾರವ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ವಿಶ್ವ ವಿದ್ಯಾಲಯದ ಮಾನ್ಯತೆ ದೊರೆತರೆ ಷಹಾಪುರದಲ್ಲಿ ಮೊದಲನೆ ದರ್ಜೆ ಕಾಲೇಜು ಪ್ರಾರಂಭ ಮಾಡುವ ಬಗ್ಗೆ ಪ್ರಸ್ತಾಪನೆ ಇದೆ.

ಶ್ರೀ ಬಾಪೂಗೌಡ ದರ್ಶನಾಪುರ.—ಗುಲ್ಬರ್ಗ ವಿಶ್ವವಿದ್ಯಾನಿಲಯದವರು ಷಹಾಪುರದಲ್ಲಿ ಡಿಗ್ರಿ ಕಾಲೇಜನ್ನು ತೆರೆಯಬೇಕೆಂದು ಸರ್ಕಾರಕ್ಕೆ ಮನವಿಯನ್ನು ಕಳಿಸಿದ್ದಾರೆಯೇ ? ಕಳಿಸಿದ್ದರೆ ಯಾವಾಗ ಕಳಿಸಿದ್ದಾರೆ ?

ಶ್ರೀ ಬಿ. ರಾಚಯ್ಯ.—ಗುಲ್ಬರ್ಗ ವಿಶ್ವವಿದ್ಯಾನಿಲಯದಿಂದ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಪತ್ರ ಬಂದಿದೆ. ಆ ಬಗ್ಗೆ ವಿವರಗಳು ಈಗ ನನ್ನ ಹತ್ತಿರ ಇಲ್ಲ.

ಶ್ರೀ ಬಾಪೂಗೌಡ ದರ್ಶನಾಪುರ.—ಈ ಕಾಲೇಜು ಸ್ಥಾಪಿಸಬೇಕೆಂದಿರುವ ಸ್ಥಳ ಕೃಷ್ಣಾ ಮೇಲ್ದಂಡೆ ಯೋಜನೆಯ ಕೇಂದ್ರ ಪ್ರದೇಶದಲ್ಲಿದೆ. ಇಬ್ಬರು ಮುಖ್ಯ ಇಂಜಿನಿಯರುಗಳು ಸೇರಿದಂತೆ ಸುಮಾರು ಆರೇಳು ನೂರು ಜನ ಸಿಬ್ಬಂದಿ ವರ್ಗದವರು ಅಲ್ಲಿ ಕೆಲಸ ಮಾಡುತ್ತಿದ್ದಾರೆ, ಷಹಾಪುರದಲ್ಲಿ ಡಿಗ್ರಿ ಕಾಲೇಜು ಇಲ್ಲ. ಈ ಬಗ್ಗೆ ಈಗಾಗಲೇ ವಿಶ್ವವಿದ್ಯಾನಿಲಯದವರು ಶಿಫಾರಸ್ಸು ಮಾಡಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಇದನ್ನು ಕಾರ್ಯಗತ ಮಾಡುವ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅಲ್ಲಿ ಪ್ರಥಮ ದರ್ಜೆ ಕಾಲೇಜನ್ನು ತೆರೆಯಬೇಕೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ವಿಶ್ವವಿದ್ಯಾನಿಲಯದವರು ಅದಕ್ಕೆ ಅಫಿಲಿಯೇಷನ್ ಕೊಡುವ ಬಗ್ಗೆ ಒಪ್ಪಿಗೆ ಬಂದಿಲ್ಲವಾದ ಕಾರಣ ತಡವಾಗಿದೆ. ಅದು ಬಂದ ತಕ್ಷಣ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಸವರಾಜ ಪಾಟೀಲ ಅನ್ವಾರಿ.—ಅಧ್ಯಕ್ಷರೇ, ನಾನು ತಮ್ಮ ಮೂಲಕ ಮಾನ್ಯ ವಿದ್ಯಾ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಮೂಲಕ ಇನ್ನೂ ಇತರ ಯಾವ ಯಾವ ತಾಲೂಕುಗಳಲ್ಲಿ ಅಥವಾ ಸ್ಥಳಗಳಲ್ಲಿ ಡಿಗ್ರಿ ಕಾಲೇಜನ್ನು ಪ್ರಾರಂಭ ಮಾಡುವ ಉದ್ದೇಶವುಳ್ಳವರಾಗಿದ್ದೀರಿ, ಮತ್ತು ಶಿಫಾರಸ್ಸು ಸಮಿತಿಯವರು ಲಿಂಗಸುಗೂರಿನಲ್ಲಿ ಡಿಗ್ರಿ ಕಾಲೇಜನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ರಾಚಯ್ಯ.—ಲಿಂಗಸುಗೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ತೆರೆಯಬೇಕೆಂದು ವಿಶ್ವ ವಿದ್ಯಾಲಯದವರಿಂದ ಯಾವುದೇ ಸೂಚನೆಯಾಗಲೀ, ವರದಿಯಾಗಲೀ ಬಂದಿಲ್ಲ.

ಶ್ರೀ ಬಾಪೂಗೌಡ ದರ್ಶನಾಪುರ.—ಸ್ವಾಮಿ, ಗುಲ್ಬರ್ಗ ವಿಶ್ವವಿದ್ಯಾಲಯದವರು ಷಹಾಪುರದಲ್ಲಾ ಕಾಲೇಜು ತೆರೆಯುವುದರ ಬಗ್ಗೆ ಶಿಫಾರಸ್ಸು ಮಾಡಿ ಕಳಿಸಿದ್ದಾರೆ. ಈ ಶೈಕ್ಷಣಿಕ ವರ್ಷದ ಅವಧಿಯಲ್ಲಾದರೂ ಅದಕ್ಕೆ ಮಂಜೂರಾತಿ ಕೊಡುತ್ತೀರಾ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ವಿಶ್ವವಿದ್ಯಾನಿಲಯದವರು ಅಫಿಲಿಯೇಶನ್ ಕೊಟ್ಟ ತಕ್ಷಣ ಮುಂದಿನ ಯೋಚನೆ ಮಾಡುತ್ತೇವೆ.

ಸಂಕೇಶ್ವರ ಮತ್ತು ಹುಕ್ಕೇರಿ ಮತ್ತು ಇತರ 11 ಗ್ರಾಮಗಳ ನೀರು ಸರಬರಾಜು ಯೋಜನೆ.

೫೩. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ನಗರಾಭಿವೃದ್ಧಿ ಮತ್ತು ಆಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಸಂಕೇಶ್ವರ ಹುಕ್ಕೇರಿ ಹಾಗೂ 11 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿ ದೊರೆತ ದಿನಾಂಕ ಯಾವುದು ?

ಆ) ಇದಕ್ಕೆ ಪ್ಲಾನು ಮತ್ತು ಎಸ್ಟಿಮೇಟು ತಯಾರಿಸಲಾಗಿದೆಯೇ ? ಇದಕ್ಕೆ ತಗಲುವ ಹಣದ ಮೊತ್ತ ಎಷ್ಟು ?

ಇ) ಕರ್ನಾಟಕ ಸರ್ಕಾರದಿಂದ ಈ ಯೋಜನೆಗೆ ಹಣದ ವ್ಯವಸ್ಥೆ ಮಾಡಿ ಕೆಲಸ ಪ್ರಾರಂಭಿಸಂವ ಬಗ್ಗೆ ಸರ್ಕಾರದಿಂದ ತಕ್ಕೊಂಡ ಕ್ರಮವೇನು ?

ಈ) ಈ ಯೋಜನೆಯನ್ನು ಎಷ್ಟು ವರ್ಷದೊಳಗಾಗಿ ಪೂರ್ಣಗೊಳಿಸಲಾಗುವುದು ?

ಉ) ಅಡಿಗಲ್ಲು ಸಮಾರಂಭಕ್ಕೆ ನಿಗದಿ ಪಡಿಸಿದ ತಾರೀಖು ಯಾವುದು ?